ದಕ್ಷಿಣಭಾರತದಲ್ಲಿ ಅವರು ರಾಮೇಶ್ವರ, ಮಧುರೆ, ಕಂಚಿ, ಕನ್ಯಾಕುಮಾರಿ, ಅನಂತಶಯನ ಮೊದಲಾದ ಕ್ಷೇತ್ರಗಳನ್ನು ಸಂದರ್ಶಿಸಿದರು. ಬೆಂಗಳೂರು ನಗರವೂ ಅವರ ಪಾದಸ್ಪರ್ಶದಿಂದ ಪುಣ್ಯಭೂಮಿಯಾಯಿತು. ಬಸವನಗುಡಿಯ ರಾಮಕೃಷ್ಣ ಮಠವು ೧೯೦೯ ರಲ್ಲಿ ಅವರ ಅಮೃತಹಸ್ತದಿಂದಲೇ ಉದ್ಘಾಟನೆಗೊಂಡಿತು. ಆ ಹೊತ್ತಿನಲ್ಲಿ ಮೈಸೂರಿನ ಅರಸರಾಗಿದ್ದ ನಾಲ್ವಡಿ ಕೃಷ್ಣರಾಜ ಒಡೆಯರು ಸ್ವಾಮಿ ಬ್ರಹ್ಮಾನಂದರ ದರ್ಶನ ಪಡೆದು ಭಾಗ್ಯವಂತರಾದರು. ಬೆಂಗಳೂರಿನ ಬಸವನಗುಡಿಯಲ್ಲಿ ಮಾಡಿದ್ದೇ ಸ್ವಾಮಿ ಬ್ರಹ್ಮಾನಂದರ ಮೊದಲ ಭಾಷಣವೂ, ಕೊನೆಯ ಭಾಷಣವೂ ಆಯಿತು. ಅದೇ ಕರ್ನಾಟಕದ ಭಾಗ್ಯ!

### ಅಪಾರ ಕರುಣಾಸಿಂಧು

ಪ್ರೀತಿ–ವಾತ್ಸಲ್ಯ–ಕರುಣೆ–ಅನುಕಂಪೆ ಮುಂತಾದ ದೈವೀಸಂಪತ್ತುಗಳು ಸ್ವಾಮಿ ಬ್ರಹ್ಮಾನಂದರಲ್ಲಿ ಸಹಜವಾಗಿಯೇ ಮನೆಮಾಡಿಕೊಂಡಿದ್ದವು. ಅದು ಅವರಿಗೆ ಹುಟ್ಟಿನಿಂದಲೇ ಬಂದಿತ್ತು. ತಮ್ಮ ಹುಟ್ಟೂರಾದ ಸಿಕ್ರಾ ಗ್ರಾಮದ ಶಾಲೆಯಲ್ಲಿ ಓದುತ್ತಿರುವಾಗ ಬಹಳ ಕೋಪಿಷ್ಠರಾದ ಬೆತ್ತದ ಮೇಷ್ಟ್ರೊಬ್ಬರಿದ್ದರು. ಕೋಲು ಕೈಗೆತ್ತಿಕೊಂಡರೆ ಸಾಕು, ಬಾಲಕರ ಅಂಗೈ ಸುಲಿದುಹೋಗುತ್ತಿತ್ತು. ರಾಖಾಲರಿಂದ ಆ ದಾರುಣ ದೃಶ್ಯವನ್ನು ನೋಡಲಾಗುತ್ತಿರಲಿಲ್ಲ. ತಮ್ಮ ಸಹಪಾಠಿಗಳಿಗಾಗುತ್ತಿದ್ದ ದಂಡನೆಯನ್ನು ಕಂಡು ಒಂದು ದಿನವಂತೂ ಗೋಳೋ ಎಂದು ಅತ್ತುಬಿಟ್ಟರು. ಆ ದೃಶ್ಯವನ್ನು ಕಂಡ ಆ ಅಧ್ಯಾಪಕರ ಕಠಿಣ ಮನಸ್ಸು ಕರಗಿಹೋಯಿತು. ಆಗಿಂದಾಗಲೇ ತಮ್ಮ ಬೆತ್ತವನ್ನು ಎರಡು ತುಂಡು ಮಾಡಿ ಬಿಸಾಡಿದವರು, ಮತ್ತೆಂದೂ ಅದನ್ನು ಮುಟ್ಟಲಿಲ್ಲ.

ಒಮ್ಮೆ ಹದಿನೈದು ವರ್ಷದ ಯುವತಿಯೊಬ್ಬಳು ಕಣ್ಣೀರಿನ ಕೋಡಿಯನ್ನೇ ಹರಿಸುತ್ತ ಬ್ರಹ್ಮಾನಂದರಲ್ಲಿಗೆ ಬಂದಳು. "ಹೋದ ವರ್ಷ ನನ್ನ ಮದುವೆಯಾಯಿತು. ಎರಡೇ ವಾರಕ್ಕೆ ನನ್ನ ಗಂಡ ತೀರಿಹೋದ. ನಾನೀಗ ಏಕಾಂಗಿ. ನನ್ನ ಭವಿಷ್ಯ ಕರಾಳವಾಗಿದೆ. ತಾವೇ ನನಗೆ ದಾರಿತೋರಿಸಿ ಕಾಪಾಡಬೇಕು" ಎಂದು ಅವರ ಪಾದಗಳ ಮೇಲೆ ಬಿದ್ದಳು. ಆಗ ಸ್ವಾಮಿ ಬ್ರಹ್ಮಾನಂದರು ಅವಳ ನೋವು ನೀಗುವಂತೆ ಸಂತೈಕೆಯ ಮಾತುಗಳನ್ನಾಡಿದರು. ಆಕೆಗೆ ಮಂತ್ರದೀಕ್ಷೆಯನ್ನಿತ್ತರು. "ಸಂನ್ಯಾಸಜೀವನವು ನಿನ್ನದಾಗಲಿ ತಾಯಿ! ನಿನ್ನ ಬದುಕು ಮಂಗಳಮಯವಾಗಲಿ" ಎಂದು ಹಾರೈಸಿ, ಬೀಳ್ಕೊಟ್ಟರು. ಆಕೆ ಕಾಶಿ, ವೃಂದಾವನ, ಹರಿದ್ವಾರಗಳಲ್ಲಿ ಹಲವು ವರ್ಷಗಳು ತಪಸ್ಸು ಮಾಡಿ, ಕೊನೆಗೆ ಕೊಲ್ಕತಾದ ಗಂಗಾತೀರದ ಕಾಳೀಘಾಟಿನಲ್ಲಿ ತನ್ನದೇ ಆದ ಮಠವೊಂದನ್ನು ಸ್ಥಾಪಿಸಿದಳು. ಅನೇಕ ದೀನ ದರಿದ್ರರ, ದುಃಖಿಗಳ ಕಣ್ಣೀರೊರೆಸುತ್ತ ತನ್ನ ಜೀವಿತವನ್ನು ಸಾರ್ಥಕಪಡಿಸಿಕೊಂಡಳು.

### ಆನಂದಮೂರ್ತಿ

ವಿನೋದಪ್ರಿಯತೆ ಎಂಬುದು ಸ್ವಾಮಿ ಬ್ರಹ್ಮಾನಂದರ ಸುವರ್ಣ ವ್ಯಕ್ತಿತ್ವಕ್ಕೆ ಪರಿಮಳವನ್ನು ಬೆರೆಸಿದಂತಾಗಿತ್ತು. ಶಿಷ್ಯರನ್ನು ಧ್ಯಾನಕ್ಕೆ ಕೂರಿಸಿ, ಅವರು ಮೈಮರೆತಿರುವಾಗ, ಅವರಿಗೆ ಪ್ರಿಯವಾದ ಹಣ್ಣುಹಂಪಲುಗಳನ್ನೋ, ಸಿಹಿತಿಂಡಿಗಳನ್ನೋ ಮುಂದಿಟ್ಟು, ಮರೆಯಾಗಿಬಿಡುತ್ತಿದ್ದರು. ಧ್ಯಾನದಿಂದ ಎಚ್ಚೆತ್ತು ಕಣ್ಣುತೆರೆದಾಗ ಅವರು ತಮಗೆ ಪ್ರಿಯವಾದ ವಸ್ತು ಎದುರಿಗಿರುವುದನ್ನು ಕಂಡು ಬೆರಗಾಗುತ್ತಿದ್ದರು. ಆಗ ಸ್ವಾಮಿ ಬ್ರಹ್ಮಾನಂದರು, "ನೋಡಿದೆಯೋ, ನಿನ್ನ ಧ್ಯಾನದ ಫಲ ನಿನಗೆ ಎಷ್ಟು ಬೇಗ ದಕ್ಕಿಬಿಟ್ಟಿತು" ಎಂದು ಹೇಳುತ್ತಾ ಆನಂದದ ಅಲೆಗಳನ್ನೇ ಎಬ್ಬಿಸುತ್ತಿದ್ದರು. "ನಾವು ದಿನದಲ್ಲಿ ಸ್ವಲ್ಪ ಹೊತ್ತು ನಗುವುದು ಒಳ್ಳೆಯದು. ಅದು ನಮ್ಮ ಶರೀರ ಮನಸ್ಸುಗಳನ್ನು ಹಗುರಗೊಳಿಸುತ್ತದೆ" ಎಂದು ಅವರು ಹೇಳುತ್ತಿದ್ದರು.

ಈ ಬಗೆಯ ವಿನೋದಶೀಲತೆಯ ನಡುವೆಯೇ ಅಂತರ್ಮುಖತೆಯೂ ಅಂತರಂಗದ ಜೀವಜಲವಾಗಿ ಅವರಲ್ಲಿ ಹರಿಯುತ್ತಿತ್ತು. ತಮ್ಮ ಹೆಸರಿಗೆ ತಕ್ಕಂತೆ ಅವರು 'ಬ್ರಹ್ಮಾನಂದ ಪರಾಯಣ'ರಾಗಿಬಿಡುತ್ತಿದ್ದರು. ಯಾವುದಾದರೂ ಕಾಗದ ಪತ್ರಗಳಿಗೆ ಸಹಿ ಹಾಕಿಸುವುದಾಗಲಿ, ಮಠದ ಆಡಳಿತಕ್ಕೆ ಸಂಬಂಧಿಸಿದ ಸಭೆಗಳಲ್ಲಿ ಅವರು ಪಾಲ್ಗೊಳ್ಳುವಂತೆ ಮಾಡುವುದಾಗಲಿ, ದುಸ್ತರವಾಗುತ್ತಿತ್ತು. ಅನಂತದತ್ತ ಹಾರಿಹೋಗುತ್ತಿದ್ದ ಆ ಆತ್ಮಪಕ್ಷಿಯನ್ನು ಪಂಜರದೊಳಗೆ ಹಿಡಿದಿಡುವುದು ಇತರರಿಗೆ ಕಷ್ಟವೇ ಆಗುತ್ತಿತ್ತು.

### ದಾರಿತೋರುವ ದೀಪಸ್ತಂಭ

ಮಠದ ಬ್ರಹ್ಮಚಾರಿಗಳನ್ನಾಗಲಿ, ಭಕ್ತರನ್ನಾಗಲಿ ಶ್ರೇಯಸ್ಕರವಾದ ಹಾದಿಯಲ್ಲಿ ಕರೆದೊಯ್ಯುವುದರಲ್ಲಿ ಸ್ವಾಮಿ ಬ್ರಹ್ಮಾನಂದರು ನಿಸ್ಸೀಮರಾಗಿದ್ದರು. ಮಠಗಳಲ್ಲಿ ಬ್ರಹ್ಮಚಾರಿಗಳ, ಯುವಸಂನ್ಯಾಸಿಗಳ ಮಧ್ಯೆ ಉಂಟಾಗುತ್ತಿದ್ದ ವಿರಸಗಳನ್ನು, ಪ್ರೇಮಭರಿತ ವಾತಾವರಣವನ್ನು ಅಲ್ಲಿ ಸೃಷ್ಟಿಸುವ ಮೂಲಕ ಪರಿಹರಿಸುತ್ತಿದ್ದರು. ಆಧ್ಯಾತ್ಮಿಕ ಸಾಧನೆಗಳಲ್ಲಿ ಅವರನ್ನು ಭದ್ರಗೊಳಿಸಿ, ಜಗಳ ಕಲಹಗಳಿಗೆ ಬಿಡುವೇ ಇಲ್ಲದಂತೆ ಮಾಡಿಬಿಡುತ್ತಿದ್ದರು. "ಈಗೀಗ ಬರುತ್ತಿರುವ ಬ್ರಹ್ಮಚಾರಿಗಳನ್ನೂ, ನೂತನ ಸಂನ್ಯಾಸಿಗಳನ್ನೂ ಸರಿದಾರಿಯಲ್ಲಿ ನಡೆಸಲು ಕೆಲವು ಹೊಸ ನಿಯಮಾವಳಿಗಳನ್ನು ರೂಪಿಸುವ ಅಗತ್ಯವಿದೆಯಲ್ಲವೆ" ಎಂದು ಸೋದರಸಂನ್ಯಾಸಿಯೊಬ್ಬರು ಕೇಳಿದ್ದಕ್ಕೆ,

"ವಿವೇಕಾನಂದರು ಮಾಡಿರುವಷ್ಟೇ ಸಾಕಪ್ಪಾ, ಬೇಕಾದರೆ ಇನ್ನಷ್ಟು ಪ್ರೀತಿ, ಮತ್ತಷ್ಟು ಭಕ್ತಿಗಳನ್ನು ಅದಕ್ಕೆ ತುಂಬಿಸಿ ಕೊಳ್ಳಿ" ಎಂದು ಅವರು ಉತ್ತರಿಸಿದ್ದು ಅತ್ಯಂತ ಮರ್ಮಸ್ಪರ್ಶಿಯಾಗಿದೆ.

## ಬ್ರಹ್ಮಾನಂದದಲ್ಲಿ ವಿಲೀನ

ಸ್ವಾಮಿ ಬ್ರಹ್ಮಾನಂದರು ಒಮ್ಮೆ ಕಾಲರಾ ಜಾಡ್ಯಕ್ಕೆ ತುತ್ತಾಗಿ ಹೇಗೋ ಚೇತರಿಸಿಕೊಂಡರು. ಆದರೆ ದೇಹವು ಶಕ್ತಿಹೀನವಾದುದೇ ಕಾರಣವಾಗಿ ಅವರಲ್ಲಿ ಸಕ್ಕರೆ ಕಾಯಿಲೆ ತಲೆದೋರಿತು. ಚಿಕಿತ್ಸೆಗಳು ಫಲಕಾರಿಯಾಗಲಿಲ್ಲ. ತಮ್ಮ ಕೊನೆಯುಸಿರಿನವರೆಗೂ ಅವರು ಲವಲವಿಕೆಯಿಂದಲೇ ಮಾತುಕತೆಯಾಡಿಕೊಂಡಿದ್ದರು. "ದುಃಖಿಸಬೇಡಿ, ಸದಾ ನಾನು ನಿಮ್ಮೊಂದಿಗೆ ಇರುತ್ತೇನೆ" ಎಂದು ಹೇಳುತ್ತ ೧೯೨೨ ರ ಎಪ್ರಿಲ್ ೧೦ ರಂದು ಬ್ರಹ್ಮಾನಂದದಲ್ಲಿ ವಿಲೀನರಾಗಿಬಿಟ್ಟರು.

## ಬ್ರಹ್ಮಾನಂದ ವಚನಸುಧೆ

ಸ್ವಾಮಿ ಬ್ರಹ್ಮಾನಂದರ ವಚನಾಮೃತವನ್ನು ಅವರ ಶಿಷ್ಯರು 'ಬ್ರಹ್ಮಾನಂದ ವಚನಸುಧೆ' ಎಂಬ ಕೃತಿಯಲ್ಲಿ ಸಂಗ್ರಹಿಸಿಕೊಟ್ಟಿದ್ದಾರೆ. ಸಾಧಕರಿಗೂ, ಗೃಹಸ್ಥರಿಗೂ ಅವು ತುಂಬಾ ಉಪಯುಕ್ತವಾಗಿವೆ:

ಮಾನವಜನ್ಮವನ್ನು ಪಡೆಯುವುದು ದುರ್ಲಭ. ಈ ಜನ್ಮದಲ್ಲೇ ಕಷ್ಟಪಟ್ಟು ಸಾಧನೆಮಾಡಿ ಯಾವ ಗುರಿಯನ್ನು ಸೇರಿದರೆ ಹಿಂದಿರುಗಿ ಬರಲಾರೆವೋ ಅದನ್ನು ಮುಟ್ಟಬೇಕು. ಶ್ರದ್ಧೆ ಮತ್ತು ಭಕ್ತಿಯ ಹಾಯಿಗಳನ್ನು ಹರಡಬೇಕು. ಆಧ್ಯಾತ್ಮಿಕ ತಂಗಾಳಿಯ ಸಹಾಯದಿಂದ ಮುಂದುವರಿಯಬೇಕು. ಆಗ ದೋಣಿಯು ಬಹುಬೇಗ ಗುರಿಯನ್ನು ಸೇರುತ್ತದೆ. ಅಷ್ಟು ಮಾತ್ರವಲ್ಲ, ಅಲ್ಲಿ ಭಗವಂತನು ನಮಗಾಗಿ ಕಾಯುತ್ತಿರುತ್ತಾನೆ. ಈ ಪ್ರಪಂಚವು ಹಳ್ಳಿಯ ಕಡೆ ಬೆಳೆಯುವ ಎಲಚಿಹಣ್ಣಿನಂತೆ ಇದೆ. ಅದು ಬರಿಯ ಬೀಜ ಮತ್ತು ಸಿಪ್ಪೆ. ಅದನ್ನು ತಿಂದರೆ ಹೊಟ್ಟೆನೋವು ಇಲ್ಲವೆ ಹುಳಿತೇಗು. ಚಂಚಲಮನಸ್ಕತೆಯಿಂದ ಯಾವ ಕಾರ್ಯವೂ ಸಾಧ್ಯವಾಗುವುದಿಲ್ಲ.

ಮಕ್ಕಳು ಕಂಬವನ್ನು ಬಿಗಿಯಾಗಿ ಹಿಡಿದುಕೊಂಡು ಅದರ ಸುತ್ತ ಗಿರಗಿರನೆ ಸುತ್ತುತ್ತಾರೆ. ಕಂಬದ ಮೇಲಿನ ಕೈ ಸಡಿಲವಾದರೆ ನೆಲಕ್ಕುರುಳಿ ನೋವನ್ನು ಅನುಭವಿಸುತ್ತಾರೆ. ಭಗವಂತನೆಂಬ ಕಂಬವನ್ನು ಆಧಾರ ವಾಗಿ ಹಿಡಿದುಕೊಂಡೇ ನಮ್ಮೆಲ್ಲ ಸಾಧನೆಗಳನ್ನೂ, ಕಾರ್ಯಗಳನ್ನೂ ಮಾಡಬೇಕು.

ಮನಸ್ಸೆಂಬುದು ಸಾಸುವೆಕಾಳಿನ ಪೊಟ್ಟಣವಿದ್ದಂತೆ. ಅದು ಒಂದುಬಾರಿ ನೆಲಕ್ಕೆ ಚೆಲ್ಲಿ ಚದುರಿತೆಂದರೆ ಮತ್ತೆ ಒಟ್ಟುಗೂಡಿಸುವುದು ಕಷ್ಟ. ತಮಗೆ ಯಾವುದು ಒಳ್ಳೆಯದು ಎಂದು ಅನೇಕರಿಗೆ ಗೊತ್ತಾಗುವುದಿಲ್ಲ. ಅದನ್ನು ಸಾಧು ಸಂಗದಿಂದ ತಿಳಿದುಕೊಳ್ಳಬೇಕು.

ನಿತ್ಯವೂ ಏಕಾಂತದಲ್ಲಿ ಒಂದಿಷ್ಟು ಕಾಲ ಕಳೆಯದಿದ್ದರೆ ನಮ್ಮ ಮನಸ್ಸಿನ ಸ್ವಭಾವವೇನು ಎಂಬುದೇ ನಮಗೆ ಗೊತ್ತಾಗುವುದಿಲ್ಲ. ಹಾಗೆ ಏಕಾಂತದಲ್ಲಿರುವಾಗ **'ನೀನೇನು ಸಾಧನೆ ಮಾಡಿದೆ?'** ಎಂದು ನಮ್ಮ ಮನಸ್ಸನ್ನೇ ಪ್ರಶ್ನಿಸಬೇಕು.

ಕರ್ಮ ಮತ್ತು ಪೂಜೆ ಒಟ್ಟಿಗೇ ಸಾಗಬೇಕು. ನಾವು ಮಾಡುವ ಕೆಲಸವೆಲ್ಲ ದೇವರಿಗಾಗಿ ಎಂಬ ಭಾವನೆಯಿಂದ ಮಾಡಬೇಕು.

ಸಾಧ್ಯವಾದಷ್ಟೂ ಭಗವದ್ವಿಷಯಗಳಿಂದ ನಿಮ್ಮ ಮನಸ್ಸನ್ನು ತುಂಬಲು ಇದೇ ಸಕಾಲ. ಅವನನ್ನು ನಿಮ್ಮವ ನನ್ನಾಗಿ ಮಾಡಿಕೊಳ್ಳಿ. **"ಅವನೇ ನಿಮ್ಮ ಸರ್ವಸ್ವ"** – ಈ ಭಾವನೆ ನಿಮ್ಮ ಮನಸ್ಸಿನಲ್ಲಿ ಸ್ಥಿರವಾಗಿ ನಿಂತರೆ ನಿಮ್ಮ ದುಃಖವೆಲ್ಲ ಕೊನೆಗಾಣುವುದು. ಆಗ ಯಾರೂ ನಿಮಗೆ ತೊಂದರೆ ಕೊಡಲಾರರು.

•


***Statement about ownership and other particulars about Viveka Prabha (according to Form IV Rule 8, circulated by Registrar of Newspapers for India).***

| | | |
|---|---|---|
| 1. Place of Publication | : | **Mysore 570 020** |
| 2. Periodicity of Publication | : | **Monthly** |
| 3. Printer's Name | : | **Swami Nityasthananda** |
| Nationality | : | **Indian** |
| Address | : | **President, Sri Ramakrishna Ashrama, Yadavagiri, Mysore 570 0204.** |
| 4. Publisher's Name | : | **Swami Nityasthananda** |
| Nationality | : | **Indian** |
| Address | : | **President, Sri Ramakrishna Ashrama, Yadavagiri, Mysore 570 020** |
| 5. Editor's Name | : | **Swami Vireshananda** |
| Nationality | : | **Indian** |
| Address | : | **Sri Ramakrishna Ashrama Yadavagiri Mysore 570 020** |
| 6. Name & Addresses of the individuals who own the newspaper and partners or share-holders holding more than 1% of the capital | : | **President, Sri Ramakrishna Ashrama, Yadavagiri Mysore 570 020** |

**I, Swami Nityasthananda, hereby declare that the particulars given above are true to the best of my knowledge and belief.**

*Sd.*
***Swami Nityasthananda***
01.03.2011 Signature of the Publisher